## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ವೃತ್ತಿ ಶಿಕ್ಷಕರ ವೃಂದವನ್ನು ಪುನರ ರಚನೆ ಮಾಡುವ ಬಗ್ಗೆ

ಓದಲಾಗಿದೆ 1) ಸರ್ಕಾರದ ಆದೇಶ ಸಂಖ್ಯೆ: ಇಡಿ 736 ಡಿಪಿಐ 91 ದಿನಾಂಕ: 26.7.1994
2) ಸರ್ಕಾರದ ಆದೇಶ ಸಂಖ್ಯೆ: ಇಡಿ 736 ಡಿಪಿಐ 91 ದಿನಾಂಕ: 19.5.1995
3) ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರ ಪತ್ರ ಸಂಖ್ಯೆ: ಸಿ4(5)ಬೋಧಿಕೆ: ವೃತ್ತಿಶಿಕ್ಷಕರ: 93–94 ದಿನಾಂಕ: 15.11.1996

---

ಪ್ರಸ್ತಾವನೆ:—

ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ: 26.7.1994ರ ಸರ್ಕಾರಿ ಆದೇಶದಲ್ಲಿ ಲಿಪಿಕ ವೃಂದಕ್ಕೆ ಸಂಬಂಧಿಸಿದಂತೆ ತಾಲ್ಲೂಕುಮಟ್ಟದ, ಜಿಲ್ಲಾಮಟ್ಟದ, ವಿಭಾಗಮಟ್ಟದ, ಹಾಗು ರಾಜ್ಯಮಟ್ಟದ ಅಗತ್ಯತೆಗಳನ್ನು ಗಮನಕ್ಕೆ ತೆಗೆದುಕೊಂಡು ಹಾಗೂ ಪರಿಶೀಲಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ವೃಂದಕ್ಕೆ ಸಂಬಂಧಿಸಿದಂತೆ ಪುನರ ರಚನೆ ಮಾಡಿ ಆದೇಶ ಜಾರಿ ಮಾಡಿದೆ.

ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ: 19.5.1995ರ ಆದೇಶದಲ್ಲಿ ಬೋಧಕ ವೃಂದಕ್ಕೆ ಸೇರಿದ ನಿರ್ದೇಶಕರು, ಸಹನಿರ್ದೇಶಕರು, ಉಪನಿರ್ದೇಶಕರು, ಬ್ಲಾಕ್ ಹಂತದ ಶಿಕ್ಷಣಾಧಿಕಾರಿಗಳು ಇನ್ನೂ ಮುಂತಾದ ವೃಂದಗಳಿಗೆ ಸಂಬಂಧಿಸಿದಂತೆ ಸಮಗ್ರ ಪರಿಶೀಲನೆ ಮಾಡಿ ಇಲಾಖೆಯನ್ನು ಪುನರರಚಿಸಿ ಆದೇಶ ಹೊರಡಿಸಿದೆ. ಸದರಿ ಆದೇಶದಲ್ಲಿ ವೃತ್ತಿ ಶಿಕ್ಷಕರು ಹಾಗು ಇತರ ವೃಂದಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಲಾಗುವುದೆಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3)ರ ದಿನಾಂಕ: 30.10.1996ರ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಪ್ರೌಢಶಾಲೆ ಹಂತದಲ್ಲಿ ವೃತ್ತಿ ಶಿಕ್ಷಣವು ಬೋಧನೆಯು ಮಹತ್ವ ಸ್ಥಾನಪಡೆದಿದ್ದು, ಈ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದ ಮಹತ್ವದ ಬಗ್ಗೆ ಸೂಕ್ತ ಪರಿಚಯ ಮಾಡಿಕೊಡುವ ಬಗ್ಗೆ ವೃತ್ತಿ ಶಿಕ್ಷಣವು ಎಲ್ಲಾ ಪ್ರೌಢಶಾಲೆಗಳಲ್ಲಿ ಇದ್ದು, ಇದಕ್ಕಾಗಿ ಸೂಕ್ತ ಮೇಲ್ವಿಚಾರಣೆ, ಪರಿವೀಕ್ಷಣೆ, ಶೈಕ್ಷಣಿಕ ಬೋಧನಾ ವಿಧಾನಗಳ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಬಗ್ಗೆ ಸೂಕ್ತ ಮೇಲ್ವಿಚಾರಣೆ ಸಿಬ್ಬಂದಿ ಕಂಡುಬಾರದ ಕಾರಣ ಯಾವುದೇ ಮಟ್ಟದಲ್ಲಿ ಮೇಲ್ವಿಚಾರಣೆ ಅಧಿಕಾರಿಗಳು ಇಲ್ಲದ ಕಾರಣ ಹಾಗು ವೃತ್ತಿ ಶಿಕ್ಷಣ ವ್ಯಾಪ್ತಿಯ ವಿಷಯಗಳ ಬಗ್ಗೆ ಪುನರ ರಚಿಸುವುದು ಅವಶ್ಯಕತೆ ಕಂಡುಬಂದಿದ್ದು, ಸದರಿ ವಿಷಯವನ್ನು ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿದ್ದು, ವಿವಿಧ ವೃಂದದಲ್ಲಿ ತೆರವಿರುವ 36 ಹುದ್ದೆಗಳನ್ನು ಅಭ್ಯರ್ಪಿತ ಮಾಡಿ, ಹಿರಿಯ ಸಹಾಯಕ ನಿರ್ದೇಶಕರು—1 ಹುದ್ದೆ; ವಿಷಯ ಪರಿವೀಕ್ಷಕರು 21 ಹುದ್ದೆ, ಶೈಕ್ಷಣಿಕ ಸಹಾಯಕರು —2 ಹುದ್ದೆ ಇವುಗಳನ್ನು ಸೃಜಿಸಲು ಹಾಗು ಯಾರೂ ಕಾರ್ಯ ನಿರ್ವಹಿಸದೆ ತೆರವಿರುವ ಹುದ್ದೆಗಳನ್ನು ಅಭ್ಯರ್ಪಿತ ಮಾಡಲು ಪ್ರಸ್ತಾಪಿಸಿರುವರು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ವೃತ್ತಿ ಶಿಕ್ಷಣದ ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ಹಾಗು ಈ ಮಟ್ಟದಲ್ಲಿ ಸಮಗ್ರ ಪುನರ ರಚನೆಗಾಗಿ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ:—

ಆದೇಶ ಸಂಖ್ಯೆ: ಇಡಿ 10 ಡಿಪಿಐ 97, ಬೆಂಗಳೂರು ದಿನಾಂಕ: 12ನೇ ಜುಲೈ 1999

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಹಾಗು ಪ್ರೌಢಶಾಲಾ ಹಂತದಲ್ಲಿನ ವೃತ್ತಿ ಶಿಕ್ಷಕರುಗಳ (ಕ್ರಾಫ್ಟ್) ವೃಂದದ ಪುನರ ರಚನೆಗಾಗಿ ಈ ಕೆಳಕಂಡ ಎ; ಬಿ; ಮತ್ತು ಸಿ ವೃಂದದ ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಳಗಿನ ಷರತ್ತುಗಳಿಗೆ ಅನುಗುಣವಾಗಿ ಸೃಜಿಸಲಾಗಿದೆ.

| ಕ್ರಮ ಸಂಖ್ಯೆ | ಹೆಸರು ಪದನಾಮ | ವೇತನಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1. | ಹಿರಿಯ ಸಹಾಯಕ ನಿರ್ದೇಶಕರು (ಕ್ರಾಫ್ಟ್) (ರಾಜ್ಯಮಟ್ಟದಲ್ಲಿ) | ರೂ. 7400–13120 | 1 |
| 2. | ವಿಷಯ ಪರಿವೀಕ್ಷಕರು (ಕ್ರಾಫ್ಟ್) (ಪ್ರತಿ ಜಿಲ್ಲೆಗೆ ಒಂದರಂತೆ) | 6000–11200 | 27 |
| 3. | ಶೈಕ್ಷಣಿಕ ಸಹಾಯಕರು (ರಾಜ್ಯಮಟ್ಟದಲ್ಲಿ) | 4150–7800 | 2 |

ಷರತ್ತುಗಳು:—

1 ಮೇಲೆ ತಿಳಿಸಲಾದ 30 ಹುದ್ದೆಗಳನ್ನು ತಕ್ಷಣದ ಮುಂದಿನ ಬಡ್ತಿಯ ವೇತನಶ್ರೇಣಿಯ ಹುದ್ದೆಯಿಂದ ನಿಯಮಾನುಸಾರ ತುಂಬುವುದು. ಸದರಿ ಹುದ್ದೆಗಳಿಗೆ ಬಡ್ತಿ ನೀಡುವಾಗ, ಯಾವ ಕಾರಣಕ್ಕೂ ಹಂತಹಾರಿಕೆ (ಲೆವಲ್ ಜಂಪಿಂಗ್) ಇರಬಾರದು.

2 ಮೇಲ್ಕಂಡಂತೆ ಹೊಸದಾಗಿ ಸೃಜಿಸಲಾದ ಈ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಭರ್ತಿಮಾಡಲು ಆದೇಶಿಸಿದೆ. ಒಂದು ವೇಳೆ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದಿದ್ದಲ್ಲಿ ಹೊಸದಾಗಿ ನಿಯಮಗಳನ್ನು ರೂಪಿಸಿಯೇ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು.

3 ಈ ಆದೇಶದಲ್ಲಿ ಸೃಜಿಸಲಾದ 30 ಹುದ್ದೆಗಳಿಗೆ ನಿಯಮಾನುಸಾರ ಅರ್ಹ ವೃತ್ತಿಶಿಕ್ಷಕರಿಗೆ ಮುಂಬಡ್ತಿ ದೊರೆತ ನಂತರ, ಈ ರೀತಿ ಮುಂಬಡ್ತಿ ಹೊಂದಿದ ಶಿಕ್ಷಕರು ಹೊಂದಿದ್ದ ಹುದ್ದೆಗಳು ತಾನೇ ತಾನಾಗಿ ರದ್ದಾಗುತ್ತವೆ ಮತ್ತು ಅಂತಹ ಹುದ್ದೆಗಳನ್ನು ಖಾಲಿ ಹುದ್ದೆಗಳೆಂದು ಪರಿಗಣಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 308 ವೆಚ್ಚ–8:98 ದಿನಾಂಕ: 12.8.1998ರಲ್ಲಿ ನೀಡಿದ ಸಹಮತಿಯ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್.ಗೋಪಾಲ ಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಇವರಿಗೆ

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು — ಇದನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಪ್ರತಿ

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
4. ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಮತ್ತು ಜಿಲ್ಲಾ ಉಪನಿರ್ದೇಶಕರುಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ
5. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ
6. ಸಂಘದ ಅಧ್ಯಕ್ಷರು (ವೃತ್ತಿಶಿಕ್ಷಣ — ಕ್ರಾಫ್ಟ್ ಶಿಕ್ಷಕರು)
7. ಶಾಖಾ ರಕ್ಷಾ ಕಡತ : ಹೆಚ್ಚಿನ ಪ್ರತಿಗಳು

ಡಿಸಿರಾ)